ನನಗೆ ಪುಸ್ತಕಗಳಿಗೆ ಬಟ್ಟೆಗೆ ಆಗ ಯಾವ ತೊಂದರೆಯೂ ಇರಲಿಲ್ಲವಾದ್ದರಿಂದ ಅಣ್ಣ ಕೆಲಸಕ್ಕೆ ಸೇರಿದ್ದು ಖುಷಿಯೇ ಆಗಿತ್ತು.

ಆಗಿನ ಕಾಲದಲ್ಲಿ ಟಿ.ವಿ.ಗಳಿರಲಿಲ್ಲ. ನಮ್ಮೂರಿನ ಪಂಚಾಯಿತಿ ಆಫೀಸಿಗೆ ಪತ್ರಿಕೆ ಬರುತ್ತಿತ್ತು. ಉಳಿದಂತೆ ಸಾಯಂಕಾಲ 'ಧಾರವಾಡ ಆಕಾಶವಾಣಿ ಕೇಂದ್ರ'ದಿಂದ ಬರುವ ವಾರ್ತೆಗಳು ನಮ್ಮ ಸುದ್ದಿಯ ಮೂಲಗಳು. ಅಕಸ್ಮಾತ್ತಾಗಿ ಗಡಿಯಲ್ಲಿ ಯುದ್ಧದ ಸಂದರ್ಭ, ಕಾಶ್ಮೀರದ ಕೊಳ್ಳದಲ್ಲಿ ರಕ್ತಪಾತ ಅನ್ನುವ ಸುದ್ದಿಗಳಿದ್ದರೆ ನಾನು ಆತಂಕದಿಂದ ಕೇಳಿಸಿಕೊಳ್ಳುತ್ತಿದ್ದೆ. ಅವ್ವನಿಗೆ ವಾರ್ತೆಗಳು ಕೂಡ ಅರ್ಥವಾಗುತ್ತಿರಲಿಲ್ಲ. ಮತ್ತು ಅಪ್ಪಿತಪ್ಪಿಯೂ ನಾನು ಇಂತಹ ದುಗುಡಗಳನ್ನು ಯಾರೊಂದಿಗೂ ಹೇಳಿಕೊಳ್ಳುತ್ತಿರಲಿಲ್ಲ. ಏನಾದರೂ ಈ ತರಹದ ಗುಸುಗುಸು ಮಾತುಗಳು ಅವ್ವ ಕೇಳಿಸಿಕೊಂಡರಂತೂ ಮುಗಿದೇಹೋಯಿತು. ಗೋಳೋ ಅಂತ ಅಳು ಶುರುವಿಟ್ಟುಕೊಳ್ಳುತ್ತಿದ್ದಳು. ಹೀಗಾಗಿ ಆದಷ್ಟು ನಾವು ಮನೆಯವರು ಇಂತಹ ಗಾಳಿಸುದ್ದಿಗಳನ್ನು ದೂರವೇ ಇಡುತ್ತಿದ್ದೆವು. ಆದರೆ ನಾವು ಕೂಡಾ ಆತಂಕದಲ್ಲೇ ದಿನ ದೂಡುತ್ತಿದ್ದೆವು. ವಾರಕ್ಕೊಮ್ಮೆ ಅವನ ಪತ್ರ ಬಂದಾಗ ಮನೆಯವರೆಲ್ಲ ಒಟ್ಟಿಗೆ ಕುಳಿತು ಪತ್ರ ಓದಿ ಖುಷಿಪಡುತಿದ್ದೆವು. ಆರು ತಿಂಗಳಿಗೊಮ್ಮೆ ರಜೆ ಪಡೆದು ಮಿಲಿಟರಿಯ ದೊಡ್ಡದಾದ ಕಪ್ಪು ಟ್ರಂಕ್ ಹೊತ್ತುಕೊಂಡು ಬರುವಾಗ ನಮ್ಮಣ್ಣ ನಮ್ಮ ಮನೆತನದ ಎಲ್ಲ ಕಷ್ಟಗಳ ಭಾರ ಹೆಗಲಮೇಲೆ ಹೊತ್ತುಬರುವ ದೇವಮಾನವನಂತೆ ಕಾಣಿಸುತ್ತಿದ್ದ. ಮತ್ತು ಈ ಸಂಭ್ರಮದ ದಿನಗಳು ಕೇವಲ ಹದಿನೈದು ದಿನ, ಹೆಚ್ಚೆಂದರೆ ಒಂದು ತಿಂಗಳಿರುತ್ತಿದ್ದವು. ರಜೆ ಮುಗಿದು ವಾಪಾಸು ಹೋಗುವಾಗ ಮನೆಯವರೆಲ್ಲ



ಅಕ್ಷರಶಃ ಬಿಕ್ಕಿ ಬಿಕ್ಕಿ ಅಳುತ್ತಿದ್ದೆವು.

ಈ ಎಲ್ಲ ಸಂಕಟ–ಸಂಭ್ರಮದ ಮಧ್ಯೆಯೇ ನಮ್ಮ ಮನೆಯ ಆರ್ಥಿಕ ಪರಿಸ್ಥಿತಿ ಸುಧಾರಿಸಿತು. ಅಣ್ಣನ ಮದುವೆಯಾಯಿತು, ಮಕ್ಕಳಾದವು. ಅವನ ಸಂಬಳದ ಉಳಿಕೆ ದುಡ್ಡಿನಲ್ಲಿ ಹೊಲದಲ್ಲಿ ಬಾವಿ ಕೊರೆದೆವು. ವರ್ಷಕ್ಕೆರಡು ಬೆಳೆ ಬೆಳೆಯುವಂತಾಯಿತು. ನಾನೂ ಓದಲು ಧಾರವಾಡಕ್ಕೆ ಹೋಗುವಂತಾಯಿತು. ಅಣ್ಣ–ಅತ್ತಿಗೆ, ಮಕ್ಕಳು ಆಗ ಗ್ವಾಲಿಯರ್‌ನಲ್ಲಿದ್ದರು.

ಅದು 1999ನೇ ಇಸವಿ. ಇದ್ದಕ್ಕಿದ್ದಂತೆ ಕಾರ್ಗಿಲ್ ಯುದ್ಧ ಶುರುವಾಗಿಬಿಟ್ಟಿತು.

ಊರಿನ ತುಂಬೆಲ್ಲ ಯದ್ಧದ ಪುಕಾರು ಎದ್ದಿತು. ಪತ್ರಿಕೆ, ರೇಡಿಯೊ, ಟಿ.ವಿ. ಗಳಲ್ಲೆಲ್ಲ ಯುದ್ಧದ ಸುದ್ದಿ. ಈ ಹೊತ್ತು ಹತ್ತು ಜವಾನರು ಹುತಾತ್ಮರಾದರು, ಮರುದಿನ ನಲವತ್ತು ಜನ, ಮಾರನೆಯ ದಿನ ನೂರು... ಹೀಗೆ ಹುತಾತ್ಮ ಯೋಧರ ಕಳೇಬರಗಳು ಶವಪೆಟ್ಟಿಗೆಯಲ್ಲಿ ಮೆರವಣಿಗೆ ಹೊತ್ತು ಬಂದಾಗ ಊರು ಅಕ್ಷರಶಃ ಕಣ್ಣೀರಾಗುತ್ತಿತ್ತು. ಇವೆಲ್ಲ ಎಲ್ಲೋ ದೂರದಲ್ಲಿ ನಡೆಯುತ್ತಿದ್ದವಾದುದರಿಂದ ಅವ್ವನಿಗೆ ಈ ಸುದ್ದಿ ಗೊತ್ತಾಗುತ್ತಿರಲಿಲ್ಲ. ಆದರೆ ಯಾವಾಗ ಪಕ್ಕದೂರು ನವಲೀಹಾಳಿನ ಯೋಧನ ಶವಪೆಟ್ಟಿಗೆ ಬಂತೋ ನಮ್ಮವ್ವ ಧರಾಶಾಹಿಯಾದಳು.

ನಮ್ಮೂರು ಹಾಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿನ ಯುವಕರ ಏಕೈಕ ಕನಸೆಂದರೆ ಮಿಲಿಟರಿ ಸೇರುವುದು. ಅದು ಬದುಕುಳಿಯುವ ಅನಿವಾರ್ಯತೆಯೋ ದೇಶಪ್ರೇಮವೋ — ಇದು ಹೀಗೆ ಎಂದು ಧೈರ್ಯವಾಗಿ ಹೇಳಲಾರೆ. ಹೀಗಾಗಿ ಇಲ್ಲಿಯ ಸುತ್ತಮುತ್ತಲಿನ ಹತ್ತಾರು ಹಳ್ಳಿಗಳಲ್ಲಿ ಊರಿಗೆ ನೂರಾರು ಯೋಧರು. ನಿವೃತ್ತ ಯೋಧರು, ಅಥವಾ ಅದರ ಕನಸಿನಲ್ಲಿ ತಯಾರಾಗುತ್ತಿರುವ ಯುವಕರಿದ್ದಾರೆ.

ಅತ್ತಿಗೆ–ಮಕ್ಕಳನ್ನು ಬಿಟ್ಟು ಅಣ್ಣ ಕಾಶ್ಮೀರದ ಗಡಿಗೆ ಹೋದ. ಯುದ್ಧ ತೀವ್ರಗತಿಯಲ್ಲಿ ನಡೆದಿತ್ತು. ಸಾಲು ಸಾಲು ಶವಗಳು ಊರೂರು ತಲುಪುತ್ತಲಿದ್ದವು. ಕರ್ನಾಟಕದಲ್ಲೇ ಸುಮಾರು ಇಪ್ಪತ್ತು ಯೋಧರು ಹುತಾತ್ಮರಾದರೆಂಬುದು ನನ್ನ ಅಂದಾಜು. ಅಣ್ಣನ ಹೆಣದ ದಾರಿ ಕಾಯುವವರಂತೆ ನಮ್ಮನೆಯ ಎಲ್ಲರ ಮುಖಗಳಲ್ಲಿ ಕಳವಳದ ಛಾಯೆಯನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿತ್ತು. ಅವ್ವನ ಸಮಾಧಾನ ಮಾಡುತ್ತ ಅತ್ತಿಗೆ, ಅತ್ತಿಗೆಯನ್ನು ಸಮಾಧಾನ ಮಾಡುತ್ತ ನಾವು... ಮತ್ತು ಅಂಗಳದಲ್ಲಿ ಆಡುತ್ತಿರುವ ಎರಡು ಮಕ್ಕಳನ್ನು ಹೇಗೆ ಸಮಾಧಾನಪಡಿಸುವುದು? ಯುದ್ಧವೆಂದರೇನೆಂದು ಮಕ್ಕಳಿಗೆ ತಿಳಿಹೇಳುವುದು ಹೇಗೆ?

ದೇವರು ದೊಡ್ಡವನಿದ್ದ. ನಮ್ಮ ಅಣ್ಣ ಕಾರ್ಗಿಲ್ ಕದನದಲ್ಲಿ ಭಾಗವಹಿಸಿ ಯಾವುದೇ ಅವಘಡಗಳಿಲ್ಲದೆ ಸುರಕ್ಷಿತವಾಗಿಯೇನೋ ಬಂದ. ಆದರೆ ಇದನ್ನು ನಾನು ಖುಷಿಪಡುವುದು ಹೇಗೆ? ನಮ್ಮ ಅಣ್ಣಂದಿರಂತಹ, ದೇಶದ ಸುಮಾರು ಐದುನೂರು ಸೈನಿಕರು ಹುತಾತ್ಮರಾಗಿದ್ದರು. ಎಷ್ಟೋ ಜನ ಕೈಕಾಲು ಕಳೆದುಕೊಂಡು ಶಾಶ್ವತ ಅಂಗವಿಕಲರಾಗಿ ಮಾಸಿಕ ಪಿಂಚಣಿಯ ನೆರವಿನಲ್ಲಿ ಮತ್ತೆ ಎಂದಿನ ಬಡತನದ ಬಾಳು ಬದುಕುತ್ತಿದ್ದರು.

ಇದೆಲ್ಲ ನೆನಪಾಗಲು ಕಾರಣವೇನೆಂದರೆ, ಸದ್ಯ ದೇಶದಲ್ಲಿ ಕೇಳಿಬರುತ್ತಿರುವ ಯುದ್ಧದ ಮಾತುಗಳು. ಯುದ್ಧ ಸರಿಯೋ ತಪ್ಪೋ ಎನ್ನುವುದು ಇಲ್ಲಿ ನನ್ನ ವಿಶ್ಲೇಷಣೆಯಲ್ಲ. ಅದು ಪ್ರಭುತ್ವಕ್ಕೆ ಬಿಟ್ಟ ವಿಚಾರ. ಯಾವ ಯುದ್ಧಗಳೂ ಯಾವ ಪ್ರಜೆಯ ಅಪೇಕ್ಷೆಯ ಮೇರೆಗೆ ನಡೆಯುವುದೂ ಇಲ್ಲ, ನಿಲ್ಲುವುದೂ ಇಲ್ಲ. ಆದರೆ ಯುದ್ಧವೊಂದು ಬಡ ಕುಟುಂಬದ ಮೇಲೆ ತಂದೊಡ್ಡುವ ಭಯಾನಕ ದುಃಸ್ವಪ್ನಗಳು ಹೇಗಿರುತ್ತವೆಯೆಂದು ಹೇಳುವುದಷ್ಟೇ ನನ್ನ ಬರಹದ ಉದ್ದೇಶ.

ಗಡಿಯಾಚೆಗಿನ, ಪಾಕಿಸ್ತಾನ ನೆಲದ ಸೈನಿಕರಿಗೂ ತಂದೆ, ತಾಯಿ, ಮಡದಿ, ಮಕ್ಕಳು ಇರಬಹುದಲ್ಲವೇ? ಅಲ್ಲಿಯೂ ನಮ್ಮ ಅಣ್ಣನಂತೆ ಕೇವಲ ಬಡತನ ನೀಗಲು ಮಿಲಿಟರಿ ಸೇರಿದವರು ಇರುವರಲ್ಲವೇ?

ಗಡಿಗಳು ಅಳಿಸಿಹೋಗಲೆಂದು ಆಶಿಸುವ ನಾನು ಇಲ್ಲಿ ಮೂರ್ಖನಂತೆ ಕಾಣುವುದಾದರೆ...

ನಾನು ಮೂರ್ಖನಾಗಿಯೇ ಇರುವುದಕ್ಕೆ ಇಷ್ಟಪಡುವೆ.

## ಭಾಗ 2

ದಿನಾಂಕ: ಫೆಬ್ರುವರಿ 26, 2019

ತಾರೀಕು ಬದಲಾಗಿದೆ. ಭೀಮಪ್ಪ ಈಗ ನಿವೃತ್ತ. ಆದರೆ, ಅವನ ಮಗ ಮಹೇಶ ಈಗ ಮಿಲಿಟರಿ ಸೇರಿದ್ದಾನೆ. ವ್ಯತ್ಯಾಸವಿಷ್ಟೇ, ಅಣ್ಣ ಪತ್ರ ಬರೆಯುತ್ತಿದ್ದ, ಮಹೇಶನ ಕೈಲಿ ಕೀ ಪ್ಯಾಡಿನ ಮೊಬೈಲ್ ಇದೆ.

ಗಡಿಗಳೂ ಹಾಗೆಯೇ ಇವೆ, ಒಂದಿಂಚೂ ಆಚೀಚೆ ಸರಿದಾಡದ ಬೇಲಿಗಳು ಇನ್ನಷ್ಟು ಬಿಗಿಯಾಗಿವೆ. ಅದರ ಜೊತೆಗೆ ಗೋಡೆಗಳೂ ಕೂಡ. ಆಗ ಅಣ್ಣನಿಗೆ ಕಾರ್ಗಿಲ್, ಮಹೇಶನಿಗೆ ಈಗ ಪುಲ್ವಾಮಾ. ಈ ಪುಲ್ವಾಮಾ ಎಂಬ ವಿಚಿತ್ರ ಹೆಸರಿನ ಊರು ಈ ಭೂಮಿಯ ಯಾವ ದಿಕ್ಕಿಗಿರುವುದೆಂದು ನನ್ನಾಣೆಗೂ

> **ಯುದ್ಧದ ತೀರ್ಮಾನವನ್ನು ಪ್ರಭುತ್ವ ಮಾಡುತ್ತದೆ. ಸಂಘರ್ಷದ ನೆಲದಲ್ಲಿನ ನನ್ನ ಮಗ ಮಹೇಶ ಅಥವಾ ಅವನಂತಹ ಅಣ್ಣತಮ್ಮಂದಿರು ಸುರಕ್ಷಿತವಾಗಿ ಮನೆಗೆ ಬರಲಿ ಎಂದು ದೇವರಿಗೆ ತುಪ್ಪದ ದೀಪ ಹಚ್ಚುವ, ಹರಕೆ ಹೊರುವಷ್ಟು ಬಲವನ್ನು ಭಾರತಾಂಬೆ ನನಗೆ ನೀಡಲಿ**